ವಿ. ಹೇಮಂತಕುಮಾರ್, ಬೆಂಗಳೂರು
ಅನ್ಯರ ವಿಷಯದಲ್ಲಿ ಮೂಗು ತೂರಿಸಬೇಡ ಅಂತಾರಲ್ಲ, ಹಾಗಂದ್ರೇನು?



ಅನ್ಯರು ಎರಡೂ ಕಡೆಯಿಂದ ಒತ್ತಿಹಿಡಿದರೆ ನಿಮ್ಮ ಉಸಿರು ನಿಲ್ಲುವುದೆಂದು.

ಮಲ್ಲಿಕಾರ್ಜುನ, ಸುರಧೇನುಪುರ
ಅಕ್ಷರಮಾಲೆಗೆ ವರ್ಣಮಾಲೆ ಎಂಬ ಮತ್ತೊಂದು ಹೆಸರೇಕೆ?
ವರ್ಣನೆಗೆ ಅನುವಾಗುವುದು ಅಕ್ಷರಗಳೇ ಆದ್ದರಿಂದ.

ಶಾಂತಾ ಡಿ. ಗೌಡ, ಬೆಂಗಳೂರು
ಎಲ್ಲೆಲ್ಲೂ ಗುಂಡಿ, ಕೊರಕಲು, ಕಸ ತುಂಬಿರುವ ಬೆಂಗಳೂರು ಎಂದಾದರೂ 'ಸ್ಮಾರ್ಟ್ ಸಿಟಿ' ಆದೀತೆ?
ಈಗಲೇ ಆಗಿದೆ – ಸ್ಮಾರ್ಟ್ ಎಂದರೆ 'ತೀವ್ರ ನೋವು ಕೊಡುವಂಥದ್ದು' ಎಂಬ ಅರ್ಥದಲ್ಲಿ.

ಸುಮಾ ರಮೇಶ್, ಹಾಸನ
ಕೃಷ್ಣನ ಪರಮ ಭಕ್ತೆಯರಿಗೂ ಗಂಡನ ಕೃಷ್ಣನಾಟ ಹಿಡಿಸದು. ಏಕೆ?



ಇವರಿಗೆ ಪರರೊಡನೆ ಪ್ರೀತಿ ಹಂಚಿಕೊಳ್ಳುವ ರಾಧೆಯ ಇರಾದೆ ಇರುವುದಿಲ್ಲವಲ್ಲ.

ನರಸಿಂಹ ಪೈ., ಕಾಸರಕೋಡ
ಕನ್ನಡವನ್ನು ಉಳಿಸಿ ಬೆಳೆಸುವಲ್ಲಿ ಜಾನಪದದ ಕೊಡುಗೆ ಏನು?
'ನಾಲಿಗೆಯಿಂದ ನಾಳೆಗೆ' ಎಂಬ ವಿಶಿಷ್ಟ ನಿರಂತರ ಕೊಡುಗೆ.

ಸಂತೆಬೆನ್ನೂರು ಮಂಜಪ್ಪ, ಭದ್ರಾವತಿ
ಶಾಲಾ ಕಾಲೇಜುಗಳಲ್ಲಿ ವಿಷಯಕ್ಕೊಬ್ಬ ಶಿಕ್ಷಕರು ಇರುತ್ತಾರೆ. ಆದರೆ 'ನೀವು ಕೇಳಿದಿರಿ?'ಯಲ್ಲಿ ನೀವೊಬ್ಬರೇ ಇದ್ದೀರಲ್ಲ?
ಇದು ಪ್ರಶ್ನೆಗಳ ಯೂನಿವರ್ಸಿಟಿ. ಯೂನಿವರ್ಸಿಟಿಗೆ ಒಬ್ಬನೇ ಕುಲಪತಿ.

ಎ. ಹರೀಶ ಡೋಂಗ್ರೆ, ಬೆಂಗಳೂರು
ಒಂದು ವೇಳೆ ಮನುಷ್ಯನ ಮರಣದ ದಿನಾಂಕ ಮೊದಲೇ ಗೊತ್ತಾದರೆ ಏನೇನಾಗಬಹುದು?
ಹಣ ತಮಗೇ ಸಿಗುವಂತೆ ವಿಮೆ ಮಾಡಿಸಬಹುದು; ಮುಂಚೆ ಕೊಲ್ಲಲಾಗದ್ದರಿಂದ ಕೊಲೆಗಳು ತಪ್ಪುತ್ತವೆ.

ವಿ.ಎಸ್.ಎಸ್.ಗುರುಶಿವಮೂರ್ತಿ, ಬೆಂಗಳೂರು
ಸಿಹಿನೆನಪುಗಳಿಗಿಂತ ಕಹಿನೆನಪುಗಳು ಮನದಲ್ಲಿ ಹೆಚ್ಚು ಶಾಶ್ವತವಾಗಿರುತ್ತವೆ. ಏಕೆ?
ಏಕೆಂದರೆ ಸಿಹಿನೆನಪು ಮನದ ಅಲೆ; ಕಹಿನೆನಪು ಮನದ ಮೇಲಿನ ಕಲೆ.

ಲತಾ ಹೆಗಡೆ, ಹುಬ್ಬಳ್ಳಿ
ಪರ್ವತರಾಜನ ಮಗಳು ಗಿರಿಜಾಗೂ, ಗಿರಿಜಾ ಮೀಸೆಗೂ ಸಂಬಂಧವಿದೆಯೆ?
ಹೂಂ. ಗಿರ್‌ಜಾ=ಬೀಳು. ಗಿರಿಜೆಗೆ ಶಿವ ಬಿದ್ದ; ಗಿರಿಜಾಮೀಸೆಯನ್ನು ಕಂಡು ಪುಕ್ಕಲರು ಬೀಳುತ್ತಾರೆ.

ಎಲ್‌ಐಸಿ ವಿಜೇಂದ್ರ, ಮೈಸೂರು
ಹೆಂಗಸಿಗೆ ಮೌನವೇ ಆಭರಣ. ಗಂಡಸಿಗೆ?
'ಮೌನವಾಗ್ಬಿಟ್ಟು! ಇನ್ನೇನು ಅನಾಹುತ ಕಾದಿದೆಯೋ' ಎಂಬ ದಿಙ್ಮೂಢತೆ.

ಜಯತೀರ್ಥ, ಹುಬ್ಬಳ್ಳಿ
ಐದು ಜನರ ಹೊಸ ಪಕ್ಷ ಕಟ್ಟಬೇಕೆಂದಿದ್ದೇನೆ. ವಿದ್ಯಾರ್ಹತೆ ಏನಾಗಿರಲಿ ರಾಮ್?
ರಾಜಕೀಯ ಪಕ್ಷವಾದರೆ, ವಿದ್ಯಾರ್ಹತೆ ಹಾಳಾಗಿರಲಿ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಬಿದ್ದಾಗ ಆಳಿಗೊಂದು ಕಲ್ಲು. ಆದರೆ ಆಳುವವನೇ ಕಲ್ಲು ಹೊಡೆದರೆ?
ಸದ್ಯದಲ್ಲೇ ಬೀಳುವ ಭಯ ಇದೆ ಎಂದರ್ಥ.

ರಾಜೀವ್ ಎನ್. ಮಾಗಲ್, ಸಕಲೇಶಪುರ
ತುಮಕೂರಿನಲ್ಲಿ 'ತುಮ್' ಹಿಂದಿ ಪದವೆಂದು ವಿರೋಧಿಸಬೇಕೆ?
'ಮಾಗಲ್' ಎಂದರೆ 'ತಾಯಿಗೆ ನೇಣು' ಎಂದು ಅರ್ಥೈಸಿಕೊಳ್ಳುವರು ಮಾತ್ರ.

## ಬಹುಮಾನಿತ ಪ್ರಶ್ನೆ

ಭಾರತೀ ಗಂಗಾಧರ್, ಬೆಂಗಳೂರು
ಸತ್ತಮೇಲೂ ಫೇಸ್ಬುಕ್, ವಾಟ್ಸಾಪ್ ನೋಡಬೇಕೆನ್ನುವುದಾದರೆ ನೇತ್ರದಾನ ಮಾಡಬಹುದು ಅಲ್ವಾ?
ಊಹೂಂ. ಅಷ್ಟೊಂದು ಚಟವಿರುವವರ ಕಣ್ಣು ಈ ಜನ್ಮದಲ್ಲೇ ಕುಲಗೆಟ್ಟಿರುತ್ತದೆ.

ಚಿಕ್ಕೋಬನಹಳ್ಳಿ ಚಾಂದ್ ಬಾಷಾ, ತಳಕು
ಮಾನವನ ಹಸ್ತಕ್ಷೇಪವಿಲ್ಲದೆಡೆ ಯಾವುದಾದರೂ ರಸ್ತೆ ಕೊಚ್ಚಿಹೋಗಿದೆಯೆ, ಗುಡ್ಡ ಕುಸಿದಿದೆಯೆ?
ಕಾಲನ ಹೊಡೆತದಿಂದ ಕೆಲವರ 'ಅಕ್ಷರರಾಸ್ತೆ'ಗಳು ಕೊಚ್ಚಿಹೋಗಿವೆ; ಮಂಜಿನ ಗುಡ್ಡಗಳು ಬಿಸಿಲಿಗೆ ಕುಸಿದಿವೆ.

ಅನಸೂಯ ಟಿ, ಕೇದಿಗೆಮನೆ
ಸೋಮಾರಿ ಕೋಗಿಲೆ ಅನ್ಯಪಕ್ಷಿಗಳ ಗೂಡಲ್ಲಿ ಮೊಟ್ಟೆಯಿಡದೆ ಕಾಗೆಯ ಗೂಡಲ್ಲೇ ಇಡುವುದೇಕೆ?



'ಬ್ಲ್ಯಾಕ್ ಲೈವ್ಸ್ ಮ್ಯಾಟರ್' ಎಂದು ಸೂಚಿಸಲಂತೆ.

ಮೀನಾಕ್ಷಿ ರಾಮಗುಂಡಿ, ಬೈಲಹೊಂಗಲ
ಮಾತು ಮನುಷ್ಯನಿಗೆ ಅಸ್ತ್ರ. ಪ್ರಾಣಿಗಳಿಗೆ?
ಅನಿವಾರ್ಯ ಗದ್ದಲ.

ರಮೇಶ್ ಜಿ. ಬೊಂಗಾಳೆ, ಬೈಲಹೊಂಗಲ
ಮಾತೆಗೂ, ಮಾತ್ರೆಗೂ ಏನು ವ್ಯತ್ಯಾಸ?
ಮಾತೆ ಕಿಲೋಗ್ರಾಂ; ಮಾತ್ರೆ ಮಿಲಿಗ್ರಾಂ.

ಕಾಳೀಹುಂಡಿ ಶಿವಕುಮಾರ್, ಮೈಸೂರು
ನಮ್ಮ ಜೀವನ ಉಲ್ಲಾಸದ ಪಯಣವಾಗಬೇಕಾದರೆ ಏನು ಮಾಡಬೇಕು?
ಭಾವ, ಭಾಷೆ, ಭಂಡಾರ ಫುಲ್ ಲಾಸ್ ಆಗದಂತೆ ನೋಡಿಕೊಳ್ಳಬೇಕು.

**■ ರಾಮ್**